


ನಿರ್ದೇಶಕರಿಗೆ ದೊರೆತರೆ, ಸಹಕಾರ ವ್ಯವಸ್ಥೆಯಲ್ಲಿ ಇದು ಇಡೀ ಸಂಸ್ಥೆಗೆ ಆ ಮೂಲಕ ಅಲ್ಲಿ ಬರುವ ರೋಗಿಗಳಿಗೆ ದೊರೆಯುತ್ತದೆ. ಹೀಗಾಗಿ, ಸಹಕಾರ ಚಳವಳಿಯ ಅಡಿಯಲ್ಲಿ ಆಸ್ಪತ್ರೆಗಳಿದ್ದರೆ ರೋಗಿಗಳಿಗೆ ಅನುಕೂಲ' ಎಂಬುದು ಆಸ್ಪತ್ರೆಯ ಮ್ಯಾನೇಜ್‌ಮೆಂಟ್ ಕನ್ಸಲ್ಟಂಟ್ ಮೇಜರ್ ರಘುನಂದನ ಹೆಗಡೆ ಅಭಿಪ್ರಾಯ.

ಉತ್ತರ ಕನ್ನಡಕ್ಕೊಂದು ಸುಸಜ್ಜಿತ ಹೈಟೆಕ್ ಆಸ್ಪತ್ರೆ ಬೇಕು ಎಂಬುದು ಬಹುವರ್ಷಗಳ ಕೂಗು. ಇದಕ್ಕಾಗಿ ನಡೆದ ಆನ್‌ಲೈನ್ ಅಭಿಯಾನ ಸರಣಿಗೆ ಸಹಸ್ರಾರು ಜನರು ಅಕ್ಷರ ಜೋಡಿಸಿದ್ದಾರೆ. ಇದಕ್ಕೆ ಸರ್ಕಾರ ಮುಂದಾಗದಿದ್ದರೆ, ಸಹಕಾರ ಕ್ಷೇತ್ರವಾದರೂ ಮನಸ್ಸು ಮಾಡಬೇಕು. ತುರ್ತು ಸಂದರ್ಭದಲ್ಲಿ ರೋಗಿಗಳಿಗೆ ಜಿಲ್ಲೆಯಲ್ಲೇ ಚಿಕಿತ್ಸೆ ಸಿಕ್ಕರೆ ಕುಟುಂಬಗಳಲ್ಲಿ ಸಂತಸ ಬಹುಕಾಲ ಇರಬಲ್ಲದು.

**■ ಸಂಧ್ಯಾ ಹೆಗಡೆ**



ಯಶಸ್ಸು ಕಾಣುತ್ತದೆ. ಸಹಕಾರಿ ಕಾಯ್ದೆಯ ನಿಯಮಗಳ ಪ್ರಕಾರ ಆಯ್ಕೆ ಆಗುವ ಆಡಳಿತ ಮಂಡಳಿಯು ಆಸ್ಪತ್ರೆಗೆ ತಕ್ಕ ಅಗತ್ಯ ನಿಯಮಗಳನ್ನು ಹಾಗೂ ಶುಲ್ಕ ನಿಗದಿಯನ್ನು ಮಾಡುತ್ತದೆ.

ಕೇರಳದ ಸಹಕಾರಿ ಆಸ್ಪತ್ರೆಗಳ ಒಕ್ಕೂಟದ ಅಧ್ಯಕ್ಷ ಪದ್ಮನಾಭ ಮಾಸ್ಟರ್ ಅವರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಅಪಾರ ನಂಬಿಕೆ. 'ಸಹಕಾರಿ ಕ್ಷೇತ್ರದಲ್ಲಿ ಲಾಭವು ಹಣದ ರೂಪದಲ್ಲಿ ಇರುವುದಿಲ್ಲ. ವಿಶ್ವವನ್ನೇ ಕಾಡುತ್ತಿರುವ ಕೊರೊನಾ ವೈರಸ್‌ನ ಬಗ್ಗೆ ಎಲ್ಲರೂ ಆತಂಕಪಡುತ್ತಿರಬೇಕಾದರೆ, ಕೇರಳವು ಆತ್ಮವಿಶ್ವಾಸದಿಂದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಏಕೆಂದರೆ ಕೇರಳವು ಆರೋಗ್ಯ ಕ್ಷೇತ್ರಕ್ಕೆ ಬಹಳ ಹಿಂದಿನಿಂದಲೇ ಒತ್ತು ನೀಡುತ್ತಾ ಬಂದಿದೆ. ಇ.ಕೆ. ನಯನಾರ್ ಅವರು ಮುಖ್ಯಮಂತ್ರಿ ಆಗಿದ್ದಾಗಲೇ, ಸಹಕಾರಿ ಚಟುವಟಿಕೆಗಳಿಗೆ ಅಪಾರ ಪ್ರೋತ್ಸಾಹ ಲಭಿಸಿತ್ತು. ಆರೋಗ್ಯ ಮಾತ್ರವಲ್ಲದೆ, ಹೆಚ್ಚಿನ ಎಲ್ಲ ಕ್ಷೇತ್ರಗಳಲ್ಲಿಯೂ ಸಹಕಾರಿ ಮಾದರಿಯನ್ನು ಕೇರಳ ರೂಪಿಸಿಕೊಂಡಿದೆ. ಆಗ ಪಿಣರಾಯಿ ವಿಜಯನ್ ಅವರೇ ಸಹಕಾರಿ ಸಚಿವರಾಗಿದ್ದರು. ಆರೋಗ್ಯ ಕ್ಷೇತ್ರಕ್ಕೆ ವಿನಿಯೋಗಿಸುವ ಶ್ರಮವು ತಕ್ಷಣವೇ ಪ್ರತಿಫಲ ನೀಡುವುದಿಲ್ಲ. ಆದರೆ ಆಪತ್ತುಗಳು ಬಂದಾಗ ಅವು ಜನರನ್ನು ಕಾಪಾಡುತ್ತವೆ. ಜನರ ಹಣವನ್ನೇ ಬಳಸಿಕೊಂಡು ಆಸ್ಪತ್ರೆಯನ್ನು ರೂಪಿಸುವುದರಿಂದ, ಜನರಿಗೂ ಆಸ್ಪತ್ರೆಯ ಒಳಿತಿನ ಬಗ್ಗೆ ಕಾಳಜಿ ಇದ್ದೇ ಇರುತ್ತದೆ. ಆದ್ದರಿಂದಲೇ ಕೇರಳದಲ್ಲಿ 40 ಸಹಕಾರಿ ಆಸ್ಪತ್ರೆಗಳು ಇಂದು ಜನರ ಅಗತ್ಯಗಳಿಗೆ ಸ್ಪಂದಿಸುತ್ತಿವೆ. ಹಾಗೆಂದು ಸಹಕಾರಿ ಆಸ್ಪತ್ರೆಗಳು ಕೊರೊನಾ ಚಿಕಿತ್ಸೆ ನೀಡುತ್ತಿವೆ ಎಂದೇನಲ್ಲ. ಈ ವೈರಸ್ ಸಮಾಜದ ಆರ್ಥಿಕತೆಗೆ ಭಾರೀ ಹೊಡೆತ ನೀಡಿದ ಸಂದರ್ಭದಲ್ಲಿ ಜನರ ಬಳಿ ಹಣ ಚಲಾವಣೆ ಆಗುತ್ತಿಲ್ಲ. ಖಾಸಗಿ ಆಸ್ಪತ್ರೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ದುಬಾರಿ ಬಿಲ್‌ಗಳನ್ನು ಅವರು ಹೇಗೆ ಭರಿಸುತ್ತಾರೆ? ಇಂಥ ಸಂದರ್ಭದಲ್ಲಿ ಸಹಕಾರಿ ಆಸ್ಪತ್ರೆಗಳು ಜನರಿಗೆ ಹೆಚ್ಚು ನೆರವಾಗುತ್ತಿವೆ' ಎನ್ನುತ್ತಾರೆ ಅವರು.